


# ಮನಶ್ಶಾಸ್ತ್ರದ ವಿಧಾನಗಳು :
# ಪ್ರಕರಣ–ಅಧ್ಯಯನ ವಿಧಾನ

ಎಸ್. ದಂಡಪಾಣಿ

ಪ್ರಕರಣ–ಅಧ್ಯಯನ ವಿಧಾನ (Case-Study Method) ಎಂದರೇನು? ಹೇಗೆ ಅದು ತರಗತಿಯಲ್ಲಿ ಪಾಠಮಾಡುವ ಶಿಕ್ಷಕನಿಗೆ ಉಪಯೋಗಿಯಾಗುತ್ತದೆ? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸೋಣ. 'Case' ಎಂಬ ಪದವನ್ನು ವೈದ್ಯರು, ವಕೀಲರು ಮತ್ತು ಪೊಲೀಸರು ಕೂಡ ಉಪಯೋಗಿಸುತ್ತಾರೆ. ಈ ಪದದ ಅರ್ಥವೇನು? "ಯಾವುದೇ ರೀತಿಯ ತೊಂದರೆಗೆ ಒಳಗಾದ ವ್ಯಕ್ತಿಗೆ ಸಂಬಂಧಪಟ್ಟ ಸಂಗತಿಯನ್ನು ಒಟ್ಟಾರೆ 'Case' ಎಂದು ಕರೆಯಬಹುದು. ಇದನ್ನು ಅರ್ಥಮಾಡಿಕೊಳ್ಳಲು ತರಗತಿಯ ಕೊಠಡಿಗೆ ಹೋಗೋಣ. ಅಲ್ಲಿ ನೀವು ಪಾಠಮಾಡುತ್ತಿದ್ದೀರಿ. ಕಡೆಯ ಬೆಂಚಿನಲ್ಲಿ ಕುಳಿತಿರುವ ಒಬ್ಬ ಹುಡುಗನಿಗೆ ನಿಮ್ಮ ಪಾಠದಲ್ಲಿ ಆಸಕ್ತಿಯೇ ಇಲ್ಲ. ನೀವು ಅವನನ್ನೇ ದಿಟ್ಟಿಸಿ ನೋಡುತ್ತೀರಿ. ನಿಮ್ಮ ಬಗ್ಗೆ ಅವನಿಗೆ ಗಮನವೇ ಇಲ್ಲ. ನಿಮಗೋ, ಪಾಠದಲ್ಲಿ ನೀವು ಹೇಳುತ್ತಿರುವ ಮುಖ್ಯವಿಷಯವನ್ನು ಬಿಟ್ಟುಹೋಗಲು ಇಷ್ಟವಿಲ್ಲ. ಪಾಠ ಮುಗಿಸುತ್ತೀರಿ. ಬೆಲ್ ಹೊಡೆಯುತ್ತದೆ. ಎಲ್ಲರೂ ಕೊಠಡಿಯಿಂದ ಹೊರಹೋಗುತ್ತಾರೆ. ಆ ಹುಡುಗ ಮಾತ್ರ ಏಕಾಂಗಿಯಾಗಿ ಕಡೆಯಲ್ಲಿ ಹೋಗುತ್ತಾನೆ.

ನೀವೊಬ್ಬ ಪ್ರಾಮಾಣಿಕ ಶಿಕ್ಷಕರಾದರೆ ಏನು ಮಾಡಬೇಕು? ಈ ಹುಡುಗನ ವಿಚಿತ್ರ ವರ್ತನೆಯನ್ನು ಅರ್ಥಮಾಡಿಕೊಳ್ಳುವ ಕಾತರತೆ ನಿಮಗೆ ಇರಬೇಕಲ್ಲವೇ? ಅವನು ತರಗತಿಯಲ್ಲಿ ಏಕೆತಾನೇ ಆಸಕ್ತಿ ತೋರಿಸುತ್ತಿಲ್ಲ? ಅವನ ಮನೆ ಎಲ್ಲಿದೆ? ಅವನ ತಂದೆ ಏನು ಕೆಲಸ ಮಾಡುತ್ತಾರೆ? ಅವನ ಹವ್ಯಾಸಗಳೇನು? ಹೀಗೆ ಅವನ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಬಹುದು. ಈ ಎಲ್ಲ ಪ್ರಶ್ನೆಗಳಿಗೆ ನೀವು ಉತ್ತರ ಕಂಡುಕೊಳ್ಳದೆ, ನೀವು ಅವನನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. **"ತರಗತಿಯಲ್ಲಿ ಒಬ್ಬ ಹುಡುಗ ಅಸಹಜವಾಗಿ ವರ್ತಿಸುತ್ತಿದ್ದರೆ, ಅವನ ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಯನ್ನು ವಿಶ್ಲೇಷಿಸುವ ಪ್ರಯತ್ನವಾಗಿ ನಾವು ಸಾಮಾನ್ಯವಾಗಿ Case -Study ವಿಧಾನವನ್ನು ಉಪಯೋಗಿಸುತ್ತೇವೆ."** ಅಂದರೆ, ಸಮಸ್ಯೆಯುಳ್ಳ ಮಗುವಿನ ತೊಂದರೆಗಳನ್ನು ಪತ್ತೆ ಹಚ್ಚಲು ನಾವು ಈ ವಿಧಾನವನ್ನು ಅನುಸರಿಸುತ್ತೇವೆ.

ಇದಕ್ಕಾಗಿ ಆ ವಿದ್ಯಾರ್ಥಿಯ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳುವುದು ಹೇಗೆ? ಅದಕ್ಕಾಗಿ ನೀವು ಅವನ ಮನೆಗೆ ಭೇಟಿಕೊಟ್ಟು ಆತನ ತಾಯಿತಂದೆಯರೊಡನೆ ಮಾತನಾಡಬಹುದು; ಆತನ ಇತರ ಶಿಕ್ಷಕರೊಡನೆ ಮಾಹಿತಿ ಹಂಚಿಕೊಳ್ಳಬಹುದು; ಆತನ ಸ್ನೇಹಿತರನ್ನು ವಿಚಾರಿಸಬಹುದು ಅಥವಾ ಆ ಹುಡುಗನನ್ನೇ ನೇರವಾಗಿ ಮಾತನಾಡಿಸಬಹುದು. ಹೀಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನೂ ಸಂಗ್ರಹಿಸಿ ನೀವು ಆ ಹುಡುಗನ ವ್ಯಕ್ತಿತ್ವದ ಚಿತ್ರಣವೊಂದನ್ನು (Profile) ತಯಾರುಮಾಡಿ ಇಟ್ಟುಕೊಳ್ಳಬಹುದು. ತರಗತಿಯಲ್ಲಿ ಅವನೇಕೆ ಆಸಕ್ತಿ ವಹಿಸುತ್ತಿಲ್ಲ ಎನ್ನುವುದು ಇದರಿಂದ ತಿಳಿದುಬರುತ್ತದೆ. ಹಾಗೆಯೇ ನಿರ್ದಿಷ್ಟ ವಾತಾವರಣವಿರುವ ಒಂದು ಸನ್ನಿವೇಶದಲ್ಲಿ ಅವನು ಯಾವ ರೀತಿ ವರ್ತಿಸಬಹುದು ಎಂಬುದರ ಬಗ್ಗೆಯೂ ನಿಮಗೆ ಸೂಚನೆಗಳು ಸಿಕ್ಕಬಹುದು. ಮುಂದೆ ನೀವು ಮಾಡಬೇಕಾದದ್ದೇನು? ಆ ವಾತಾವರಣದಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದರಿಂದ, ಆತನ ವರ್ತನೆಯಲ್ಲಿ ಮತ್ತು ಹವ್ಯಾಸಗಳಲ್ಲಿ ಮಾರ್ಪಾಡು ತರಬಹುದೇ ಎಂದು ವಿಶ್ಲೇಷಿಸಿ, ಅದಕ್ಕಾಗಿ ಪ್ರಯತ್ನಿಸುವುದು. ಅವನು ಯಾವ ರೀತಿಯ ಮನೋವೈಜ್ಞಾನಿಕ ಸಮಸ್ಯೆಯನ್ನು ಎದುರಿಸುತ್ತಿದ್ದಾನೆ ಎನ್ನುವುದರ ಬಗ್ಗೆ ನಿಮಗೆ ಗೊತ್ತಿಲ್ಲದಿದ್ದರೆ, ಈ ಪ್ರಯತ್ನ ಸಫಲವಾಗುವುದು ಬಹು ಕಷ್ಟ. ಇದಕ್ಕಾಗಿ ನಿಮಗೆ ಮನೋವಿಜ್ಞಾನದ ತರಬೇತಿ ಬೇಕಾಗುತ್ತದೆ. ಅಲ್ಲದೆ, ಬುದ್ಧಿ ಪರೀಕ್ಷೆ, ವ್ಯಕ್ತಿತ್ವದ ಪರೀಕ್ಷೆ, ಯೋಗ್ಯತಾ ಪರೀಕ್ಷೆ ಮುಂತಾದ ಮನೋವೈಜ್ಞಾನಿಕ ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ. ಆ ಕ್ಷೇತ್ರದ ತಜ್ಞರು ಮಾತ್ರವೇ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬಲ್ಲರು.

ಆದರೂ, ಒಬ್ಬ ವಿದ್ಯಾರ್ಥಿಯನ್ನು 'ವೈಯಕ್ತಿಕ'ವಾಗಿ ಅಧ್ಯಯನ ಮಾಡಿದರೆ ಮಾತ್ರವೇ ಅವನ ಸಮಸ್ಯೆಯ ಬಗ್ಗೆ ನೀವು ಹೆಚ್ಚು ತಿಳಿದುಕೊಳ್ಳಲು ಸಾಧ್ಯ. ಹೀಗೆ ಮಾಡುವುದರಿಂದ ನೀವು ನಿಮ್ಮ ಶಾಲಾತರಗತಿಯನ್ನು ಚೆನ್ನಾಗಿ ನಿರ್ವಹಿಸಬಹುದು. ಹಾಗೆಯೇ ಆ ವಿದ್ಯಾರ್ಥಿಯ ಬಗ್ಗೆ ಅನಗತ್ಯ ಪೂರ್ವಗ್ರಹವನ್ನು ಹೊಂದದೆ ಇರಲೂ ಇದು ಸಹಾಯಕವಾಗುತ್ತದೆ.

**ಚಟುವಟಿಕೆ :** ನಿಮ್ಮ ಶಾಲೆಯಲ್ಲಿರುವ ಸಮಸ್ಯಾತ್ಮಕ ವಿದ್ಯಾರ್ಥಿಯೊಬ್ಬನ ಹಿನ್ನೆಲೆಯನ್ನು ಚೆನ್ನಾಗಿ ಅಧ್ಯಯನ ಮಾಡಿ, ಅವನ ವ್ಯಕ್ತಿಚಿತ್ರಣವನ್ನು ತಯಾರಿಸಿ, ಅದನ್ನು ವರದಿಯ ರೂಪದಲ್ಲಿ ಬರೆದಿಟ್ಟುಕೊಳ್ಳಿ. ಆ ವಿದ್ಯಾರ್ಥಿಗೆ ವೈಯಕ್ತಿಕ ಆಪ್ತಸಲಹೆ ನೀಡಿ, ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡಿ. ಹಾಗೆಯೇ ಆತನ ಮನೆಯವರು, ಸ್ನೇಹಿತರು, ಶಿಕ್ಷಕರು ಕೂಡ ಈ ಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಿ. ಇದೇ ವಿಧಾನವನ್ನು ಇತರ ಸಮಸ್ಯಾತ್ಮಕ ವಿದ್ಯಾರ್ಥಿಗಳ ವಿಷಯದಲ್ಲಿಯೂ ಅನುಸರಿಸಿ.

# ಶ್ರೀರಾಮಾನುಜರು - ಜೀವನ ಮತ್ತು ಸಾಧನೆ

**ಎಚ್. ವಿ. ಸರೋಜ**

**(ಹಿಂದಿನ ಸಂಚಿಕೆಯಿಂದ)**

## ರಾಮಾನುಜರ ಕುಟುಂಬ

ರಾಮಾನುಜಾಚಾರ್ಯರಿಗೆ ಜಾತಿಪದ್ಧತಿಯಲ್ಲಿ ನಂಬಿಕೆ ಇರಲಿಲ್ಲ. ಆ ಮೂಢನಂಬಿಕೆಗಳು ನಿವಾರಣೆಯಾಗಬೇಕೆಂಬುದು ಅವರ ಬಯಕೆಯಾಗಿತ್ತು. ಕಾಂಚೀಪೂರ್ಣರೆಂಬುವವರು ವರದರಾಜಸ್ವಾಮಿಯ ಬಹಳ ದೊಡ್ಡ ಭಕ್ತರು, ಮಹಿಮಾನ್ವಿತರು. ಇದು ಕಾಂಚೀಪುರದಲ್ಲಿ ಎಲ್ಲರಿಗೂ ತಿಳಿದ ವಿಷಯ. ಆದರೆ ಇವರು ಬ್ರಾಹ್ಮಣರಾಗಿರಲಿಲ್ಲ. ಆದರೂ ರಾಮಾನುಜಾಚಾರ್ಯರು ಅವರನ್ನು ತಮ್ಮ ಗುರುಗಳೆಂದೇ ಭಾವಿಸಿ, ಅವರಿಗೆ ಪ್ರತಿನಿತ್ಯವೂ ನಮಸ್ಕರಿಸುತ್ತಿದ್ದರು. ಆದರೆ ಕಾಂಚೀಪೂರ್ಣರು ತಮಗೆ ನಮಸ್ಕಾರ ಮಾಡಬಾರದೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದರು. ಆದರೂ ರಾಮಾನುಜರು ನಮಸ್ಕಾರ ಮಾಡುವುದನ್ನು ಬಿಡುತ್ತಿರಲಿಲ್ಲ.



ಒಮ್ಮೆ ರಾಮಾನುಜರು ಕಾಂಚೀಪೂರ್ಣರನ್ನು ತಮ್ಮ ಮನೆಗೆ ಆಹ್ವಾನಿಸಿದರು. ಅವರು ಊಟ ಮಾಡಿದ ಪ್ರಸಾದವನ್ನು ತಾವು ಸ್ವೀಕಾರ ಮಾಡಬೇಕೆಂಬುದೇ ರಾಮಾನುಜರ ಇಚ್ಛೆಯಾಗಿತ್ತು. ಅಂದು ಮನೆಯಲ್ಲಿ ವಿಶೇಷವಾದ ಅಡುಗೆಯನ್ನು ಮಾಡಿಸಿದ್ದರು. ಆದರೆ ರಾಮಾನುಜರ ಹೆಂಡತಿ ಬಹಳ ಆಚಾರವಂತೆ, ಮಡಿವಂತ ಮಹಿಳೆ. ಕಾಂಚೀಪೂರ್ಣರಿಗೆ ಇದು ತಿಳಿದಿತ್ತು. ತಮ್ಮಿಂದ ಇವರಿಬ್ಬರಲ್ಲಿ ಮನಸ್ತಾಪ ಉಂಟಾಗಬಾರದೆಂದು ಅವರು ಎಣಿಸಿದರು. ಆದ್ದರಿಂದ ರಾಮಾನುಜರು ತಮ್ಮನ್ನು ಊಟಕ್ಕೆ ಕರೆಯಲು ಬರುವಷ್ಟರಲ್ಲಿ, ಅವರು ಬೇರೆ ದಾರಿಯಲ್ಲಿ ರಾಮಾನುಜರ ಮನೆಗೆ ಹೋಗಿ, ಊಟ ಮಾಡಿ ಬಂದುಬಿಟ್ಟರು. ಅವರು ಊಟ ಮಾಡಿದ ತಕ್ಷಣ, ರಾಮಾನುಜರ ಹೆಂಡತಿ ಆ ಅಡುಗೆಯನ್ನೆಲ್ಲ ಯಾರಿಗೋ ನೀಡಿಬಿಟ್ಟರು; ಅಡುಗೆಯ ಮನೆಯನ್ನು ಶುಚಿ ಮಾಡಿ, ಮತ್ತೆ ಮಡಿಯುಟ್ಟು ಬೇರೆ ಅಡುಗೆ ಮಾಡಿದರು.

ರಾಮಾನುಜರು ಮನೆಗೆ ವಾಪಸ್ಸು ಬಂದರು. ನಡೆದುದೆಲ್ಲಾ ಅವರಿಗೆ ತಿಳಿಯಿತು. ಗುರುವಿನ ಪ್ರಸಾದಕ್ಕಾಗಿ ತಾವು ಮಾಡಿದ ಏರ್ಪಾಡೆಲ್ಲ ಈ ರೀತಿ ಭಗ್ನವಾಗಿದ್ದು ಕಂಡು, ಅವರಿಗೆ ನಿರಾಶೆ, ದುಃಖ, ನೋವು ಉಂಟಾದವು. ಗುರುಪ್ರಸಾದವನ್ನು ತಪ್ಪಿಸಿದಳಲ್ಲಾ ಎಂದು ಪತ್ನಿಯ ಮೇಲೆ ಅವರು ಕೋಪಗೊಂಡರು. ಆಕೆಯ ಸಂಕುಚಿತ ಭಾವನೆಯನ್ನು ನೋಡಿ, ಅವರಿಗೆ ತುಂಬ ಬೇಸರ ವಾಯಿತು.

ಮತ್ತೊಂದು ದಿನ ಅಂತಹುದೇ ಇನ್ನೊಂದು ಘಟನೆ ಅವರ ಮನೆಯಲ್ಲಿ ನಡೆಯಿತು. ಹಸಿದ ಬಡವರ ಗುಂಪೊಂದು ಅವರ ಮನೆಬಾಗಿಲಿಗೆ ಬಂದು ಆಹಾರ ಬೇಡಿತು. ರಾಮಾನುಜರ ಪತ್ನಿ ಮನೆಯಲ್ಲಿ ಏನೂ ಇಲ್ಲವೆಂದು ಹೇಳಿ ಅವರನ್ನು ವಾಪಸ್ಸು ಕಳಿಸಿಬಿಟ್ಟರು. ಆದರೆ ರಾಮಾನುಜರಿಗೆ ಆಕೆಯ ಮಾತಿನಲ್ಲಿ ಸಂಶಯ ಬಂದಿತು. ಮನೆಯ ಒಳಗಡೆ ಹೋಗಿ ನೋಡಿದರು. ಅಲ್ಲಿ ಅನ್ನವಿತ್ತು. ತಾವೇ ಆ ಬಡವರನ್ನು ಮತ್ತೆ ಕರೆದು ಅವರಿಗೆ ಆ ಅನ್ನವನ್ನು ಬಡಿಸಿದರು. ಪತ್ನಿಯು ಅನ್ನ ಇಲ್ಲವೆಂದು ಸುಳ್ಳು ಹೇಳಿದಳಲ್ಲಾ ಎಂದು ಅವರ ಮನಸ್ಸಿಗೆ ಬಹಳ ನೋವುಂಟಾಯಿತು.

ರಾಮಾನುಜರಿಗೆ ಬ್ರಹ್ಮಸೂತ್ರಗಳಲ್ಲಿ ಕೆಲವು ಸೂತ್ರಗಳ ವಿಷಯದಲ್ಲಿ ಸ್ಪಷ್ಟವಾದ ತಿಳಿವಳಿಕೆ ಇರಲಿಲ್ಲ. ಆದ್ದರಿಂದ ಅವರು ಕಾಂಚೀಪೂರ್ಣರಲ್ಲಿ ಇವುಗಳಿಗೆ ವಿವರಣೆಯನ್ನು ನೀಡಬೇಕೆಂದು ಕೇಳಿಕೊಂಡರು. ಆದರೆ ಕಾಂಚೀಪೂರ್ಣರಿಗೆ ರಾಮಾನುಜರಲ್ಲಿ ಇದ್ದ ಅಗಾಧವಾದ ವಿದ್ಯೆ, ಜ್ಞಾನ ಮತ್ತು ಭಕ್ತಿಗಳಲ್ಲಿ ತುಂಬು ವಿಶ್ವಾಸವಿತ್ತು. ಹೀಗಾಗಿ ಅವರಿಗೆ ತಾವು ಈ ವಿಷಯದಲ್ಲಿ ರಾಮಾನುಜರಿಗೆ ಬೋಧಿಸಲು ಅಧಿಕಾರಿಗಳಲ್ಲ ಎಂದೆನಿಸಿತು. ರಾಮಾನುಜರ ಸಂಶಯಗಳನ್ನು ಅವರು ವರದರಾಜಸ್ವಾಮಿಯಲ್ಲಿ ಬಿನ್ನವಿಸಿ, ಅದಕ್ಕೆ ಪರಿಹಾರಗಳನ್ನು ದೊರಕಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಭಗವಂತನು ಅವುಗಳಿಗೆ ಸರಿಯಾದ ಉತ್ತರಗಳನ್ನು ಕಾಂಚೀಪೂರ್ಣರಿಗೆ ಅನುಗ್ರಹಿಸಿದನು. ಅವನ್ನು ಕಾಂಚೀಪೂರ್ಣರು ರಾಮಾನುಜರಿಗೆ ತಿಳಿಸಿದರು. ಇದರಿಂದ ರಾಮಾನುಜರು ಮಹದಾನಂದಗೊಂಡರು. ಇವೇ ಮುಂದೆ ವಿಶಿಷ್ಟಾದ್ವೈತ ಸಿದ್ಧಾಂತದ ಮೂಲತತ್ತ್ವಗಳಾದವು.

ತಮ್ಮ ಮುಂದಿನ ಗುರುಗಳು ಮಹಾಪೂರ್ಣರು ಎಂದು ಭಗವಂತನ ಅನುಗ್ರಹದಿಂದ ರಾಮಾನುಜರಿಗೆ ತಿಳಿದುಬಂತು. ಅವರನ್ನು ಕಾಣಲು ಅವರು ಶ್ರೀರಂಗದೆಡೆಗೆ ಹೊರಟರು. ಇದೇ ಸಂದರ್ಭದಲ್ಲಿ ಮಹಾಪೂರ್ಣರು ಕೂಡ ಕಾಂಚೀಪುರದ ಕಡೆಗೆ ಈಗಾಗಲೇ ಹೊರಟಿದ್ದರು. ಅವರಿಬ್ಬರೂ ಮಾರ್ಗಮಧ್ಯದಲ್ಲಿ ಭೇಟಿಯಾದರು. ರಾಮಾನುಜರು ಮಹಾಪೂರ್ಣರನ್ನು,